# ಕ್ರಿಸ್ತ್ ಜಯಂತಿಗೆ ಚಾಂಪಿಯನ್ ಪಟ್ಟ

■ **ವಿಕ ಸುದ್ದಿಲೋಕ** ಬೆಂಗಳೂರು

ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಬೆಂಗಳೂರು ವಿಶ್ವವಿದ್ಯಾಲಯ ಅಂತರ್ ಕಾಲೇಜು ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರಿನ ಕ್ರಿಸ್ತ್ ಜಯಂತಿ ಕಾಲೇಜಿನ ಮೂವರು ಸ್ಪರ್ಧಿಗಳು ಚಿನ್ನದ ಪದಕ ಗೆಲ್ಲುವುದರೊಂದಿಗೆ ಕಾಲೇಜು ತಂಡ ಚಾಂಪಿಯನ್ ಪಟ್ಟ ಗೆದ್ದುಕೊಂಡಿದೆ.

ವಾಲ್ಟರ್‌ವೇಟ್ ವಿಭಾಗದಲ್ಲಿ ಮೊದಲ ವರ್ಷದ ಬಿಕಾಂ ವಿದ್ಯಾರ್ಥಿ ಚಂದ್ರ ಬಹದ್ದೂರ್ ತಮಂಗ್, ಹೇವಿವೇಟ್ ವಿಭಾಗದಲ್ಲಿ ಬಿಬಿಎ ವಿದ್ಯಾರ್ಥಿ ರಾಮಚಂದ್ರನ್ ಹಾಗೂ ಬಾಟಮ್‌ವೇಟ್ ವಿಭಾಗದಲ್ಲಿ ಬಿಬಿಎ ವಿದ್ಯಾರ್ಥಿ ಗ್ರೆಗೊರಿ ಕೆಮೆನ್‌ಲಾಂಗ್ ಸವಿನಾ ಚಿನ್ನದ ಪದಕ ಗೆದ್ದಿದ್ದಾರೆ. ಇದರೊಂದಿಗೆ ಕಾಲೇಜು ಸಮಗ್ರ ಚಾಂಪಿಯನ್ ಪಟ್ಟ ಗೆದ್ದುಕೊಂಡಿತು.



ಚಿನ್ನ ಗೆದ್ದ ಬಾಕ್ಸರ್‌ಗಳೊಂದಿಗೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಎಸ್.ಆರೋಕಿಯಾ ರಾಜ್, ಉಪ ಪ್ರಾಂಶುಪಾಲ ಫ್ರಾನ್ಸಿಸ್ ಆಗಸ್ಟಿನ್ ಜಾರ್ಜ್, ಪ್ರಾಂಶುಪಾಲರಾದ ಫ್ರಾನ್ಸಿಸ್ ಜೋಸ್‌ಕುಟ್ಟಿ ಹಾಗೂ ಹಣಕಾಸಿನ ಆಡಳಿತಾಧಿಕಾರಿ ಫ್ರಾನ್ಸಿಸ್ ಲಿಜೊ ಪಿ. ಥಾಮಸ್.